# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರ
ಜಿಲ್ಲಾ ನ್ಯಾಯಾಲಯ ಸಂಕೀರ್ಣ, ಬೀದರ – 585401.

**DISTRICT LEGAL SERVICES AUTHORITY, BIDAR**

District Court Complex, Bidar- 585401, Phone: 08482-226116

E-mail: dlsabdr@gmail.com


==================================================

**ADM. ORDER NO. /2025** ದಿನಾಂಕಃ **16/04/2025**

**NOTIFICATION**

ವಿಷಯಃ- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ ಕಛೇರಿಯಲ್ಲಿ ಕಾರ್ಯ ನಿರ್ವಹಿಸಲು ಪ್ಯಾನಲ್ ವಕೀಲರುಗಳ |ನೇಮಕಾತಿಗಾಗಿ ಅರ್ಜಿ ಆಹ್ವಾನಿಸುತ್ತಿರುವ ಬಗ್ಗೆ.

ಉಲ್ಲೇಖಃ- 1. KSLSA:03/LegalAid/2022/386-2022 dated:09.02.2022
2. KSLSA:03/LegalAid/2022/1541-2022 dated:30.06.2022
3. ಗೌರವಾನಿತ್ವ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಪತ್ರ ಸಂಖ್ಯೆ: 01/Panel Advocates/2025/596, ದಿ. 09.04.2025

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರನಲ್ಲಿ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ರೆಗೂಲೇಶನ್ 2010 ನಿಯಮ 8 ರಂತೆ ಪ್ಯಾನಲ ವಕೀಲರ ಪಟ್ಟಿಯನ್ನು ಪ್ರತಿ ಮೂರು (03) ವರ್ಷಗಳಿಗೊಮ್ಮೆ ನವೀಕರಿಸಬೇಕಾಗಿರುತ್ತದೆ. ಅದರನ್ವಯ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರನಲ್ಲಿ ಕಾನೂನು ನೆರವು ನೀಡಲಾಗುವ ಪ್ರಕರಣಗಳಲ್ಲಿ ಹಾಜರಾಗಲು, ಪ್ರಂಟ್ ಆಫೀಸ್ (ನ್ಯಾಯಾಲಯ ಆವರಣ) ತಹಶೀಲ್ದಾರ ಕಛೇರಿ, ಸಿ.ಡಿ.ಪಿ.ಓ. ಕಛೇರಿ, ಕಾರಾಗೃಹ, ಬಾಲ ನ್ಯಾಯ ಮಂಡಳಿ, ಗ್ರಾಮೀಣ ಕಾನೂನು ನೆರವು ಮತ್ತು ಸಲಹಾ ಕೇಂದ್ರ ಹಾಗೂ ಎ.ಆರ್.ಟಿ. ಕೇಂದ್ರಗಳಲ್ಲಿನ ಕಾನೂನು ಸಲಹಾ ಕೇಂದ್ರಗಳಿಗೆ, ಸ್ವಾಧಾರ ಗೃಹಗಳಿಗೆ ಹಾಗೂ ಎಲ್ಲಾ ಪೋಲಿಸ ಠಾಣೆಯಲ್ಲಿರುವ ಕಾನೂನು ಸಲಹಾ ಕೇಂದ್ರಕ್ಕೆ ಬೇಟಿ ನೀಡಿ ಕಾನೂನು ಸಲಹೆ ನೀಡಲು ಕಾನೂನು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಹೊಸದಾಗಿ ಪ್ಯಾನಲ್ ವಕೀಲರನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಆದ್ದರಿಂದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರನಲ್ಲಿ ಒಟ್ಟು 25 ಪ್ಯಾನಲ್ ವಕೀಲರನ್ನು ಹೊಸದಾಗಿ ನೇಮಕಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

## :ಜಿಲ್ಲಾ ಕಾನೂನು ಸೇವಗಳ ಪ್ರಾಧಕಾರ ಬೀದರ :

| ಕ್ರ. ಸಂ | ಜಿಲ್ಲೆ/ ತಾಲೂಕು | ಆಯ್ಕೆ ಮಾಡಬೇಕಾದ ವಕೀಲರ ಸಂಖ್ಯೆ |
|---|---|---|
| 1 | ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರ | 25 |
| ಒಟ್ಟು | | **25** |

ಈ ಕೆಳಗೆ ನಮೂದಿಸಿದ ಷರತ್ತುಗಳಂತೆ ಅರ್ಹ ವಕೀಲರು ದಿನಾಂಕ 16.04.2025 ರಿಂದ ದಿನಾಂಕ: 29.04.2025 ರ, ಮಧ್ಯಾನ 01.00 ಗಂಟೆಯವರೆಗೆ ನಿಗಧಿತ ನಮೂನೆಯಲ್ಲಿ ತಮ್ಮ ಪೂರ್ಣ ವಿವರಗಳೊಂದಿಗೆ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರ ಇವರ ಹೆಸರಿನಲ್ಲಿ ಆಪ್-ಲೈನ್ ಮೂಲಕ ಅರ್ಜಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ , ಬೀದರ ಕಛೇಯಲ್ಲಿ ಸಲ್ಲಿಸಲು ಕೋರಲಾಗಿದೆ. ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಮಾರ್ಗಸೂಚಿ:-

1. ವಕೀಲ ವೃತ್ತಿಯಲ್ಲಿ ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು.
2. ವಕೀಲರ ಸಂಘದ ಸದಸ್ಯತ್ವ ಪಡೆದುಕೊಂಡ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು.
3. ಬಾರ ಕೌಂನ್ಸಿ ಆಫ ಇಂಡಿಯಾ ಇವರು ಆಯೋಜಿಸಿದ ಪರೀಕ್ಷೆಯಲ್ಲಿ ಉತೀರ್ಣರಾಗಿರಬೇಕು .
4. ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿರಬೇಕು.

**ಅರ್ಜಿದಾರರಿಗೆ ಸಾಮಾನ್ಯ ಸೂಚನೆಗಳು:-**

1. ಪ್ರಾಧಿಕಾರದ**ಲ್ಲಿ** ನ್ಯಾಯವಾದಿಗಳಾಗಿ ಸೇವೆ ಸಲ್ಲಿಸಲು ಇಚ್ಛೆಯಿರುವ **ಅರ್ಹ ವಕೀಲರು** ಅರ್ಜಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಎಡಿಆರ್ ಕಟ್ಟಡ ನ್ಯಾಯಲಯಗಳ ಆವರಣ, **ಬೀದರನಲ್ಲಿ** ಪಡೆದುಕೊಳ್ಳಬಹುದು.

2. ಅಭ್ಯರ್ಥಿಗಳು ಭರ್ತಿಮಾಡಿದ ನಿಗದಿತ ನಮೂನೆಯೊಂದಿಗೆ ಕಾನೂನು ಪದವಿ ಅಂಕಪಟ್ಟಿಗಳ ಧೃಡಿಕೃತ ದಾಖಲಾತಿಗಳು, ಆಧಾರ ಕಾರ್ಡನ ಪ್ರತಿ, ಅಭ್ಯರ್ಥಿ ನೊಂದಣಿ ಮಾಡಿಕೊಂಡ ವಕೀಲರ ಸಂಘದಿಂದ ವೃತ್ತಿಯ ಅನುಭವದ ಪ್ರಮಾಣ ಪತ್ರ, ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನಿಂದ ಪಡೆದುಕೊಂಡ ಪ್ರಮಾಣ ಪತ್ರವನ್ನು, ಜಾತಿ ಪ್ರಮಾಣ ಪತ್ರವನು, **ಬಾರ ಕೌಂನ್ಸಿಲ ಆಫ ಇಂಡಿಯಾ ಇವರು ಆಯೋಜಿಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಗ್ಗೆ ಪ್ರಮಾಣ ಪತ್ರ** .ಹಾಗೂ ಪಾಸ್‌ಪೋರ್ಟ ಅಳತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
3. ಅಭ್ಯರ್ಥಿಗಳು ಸಾಮಾನ್ಯ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಹಾಗೂ ಅನುಸರಿಸುವುದರೊಂದಿಗೆ ಅರ್ಜಿಯನ್ನು ಸಲ್ಲಿಸುವುದು.
4. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಚಾಲ್ತಿ ಇರುವ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವುದು.
5. ಪ್ರಾಧಿಕಾರದ ನ್ಯಾಯವಾದಿಗಳನ್ನಾಗಿ ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸಮಿತಿಯ ಅಧ್ಯಕ್ಷರ ನಿರ್ಣಯವೇ ಅಂತಿಮ.
6. ಅರ್ಹ ಅಭ್ಯರ್ಥಿಗಳ ಸಂದರ್ಶನದ ಸಮಯ ಹಾಗೂ ಸ್ಥಳವನ್ನು ಜಿಲ್ಲಾ ಕಾನೂನು ಸೇವೆಗಳ **ಪ್ರಾಧಿಕಾರವು ನೋಟಿಸ** ಮುಖಾಂತರ ತಿಳಿಸಲಾಗುವುದು.

7. ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡ ನಂತರದಲ್ಲಿ ಪ್ರಾಧಿಕಾರ ನ್ಯಾಯವಾದಿಗಳ ಕರ್ತವ್ಯ ನಿರ್ವಹಣೆಯಲ್ಲಿ ತೃಪ್ತಿಕರವಾಗಿರದ ಸಂದರ್ಭದಲ್ಲಿ ಅಂತಹ ನ್ಯಾಯವಾದಿಯನ್ನು ಪ್ರಾಧಿಕಾರ ದಿಂದ **ಪೂರ್ವಭಾವಿ ನೋಟಿಸ ಕೊಡದೆ** ತೆಗದು ಹಾಕುವ ಸಂಪೂರ್ಣ ಅಧಿಕಾರ **ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರಿಗೆ** ಇರುತ್ತದೆ.
8. ಪ್ರಾಧಿಕಾರದ ನ್ಯಾಯವಾದಿಯಾಗಿ ನೇಮಕಗೊಂಡು ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಉಚಿತ ಕಾನೂನು ನೆರವು ಕೋರಿ ಬಂದ ಅರ್ಜಿದಾರರಿಂದ ಯಾವುದೇ ಗೌರವಧನ ಅಥವಾ ಮೌಲ್ಯಯುತವಾದ ಕಾಣಿಕೆಗಳನ್ನು ಪಡೆಯುವಂತಿಲ್ಲ ಹಾಗೂ ಅವರನ್ನು ಕೊಡುವಂತೆ ಒತ್ತಾಯಿಸುವಂತಿಲ್ಲ, ಹಾಗೆ ಪಡೆದುಕೊಂಡ ಮಾಹಿತಿಯು ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ತಕ್ಷಣವೇ ಪ್ರಾಧಿಕಾರದ ನ್ಯಾಯವಾದಿ ಕರ್ತವ್ಯದಿಂದ ವಜಾಗೊಳಿಸಲಾಗುವುದು.

9. ಪ್ರಾಧಿಕಾರದ ನ್ಯಾಯವಾದಿಗಳಾಗಿ ಕಾರ್ಯನಿರ್ವಹಿಸಲು 03 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಒಂದು ವೇಳೆ ಪ್ರಾಧಿಕಾರದ ನ್ಯಾಯವಾದಿಯ ಕಾರ್ಯವೈಖರಿಯು ತೃಪ್ತಿಕರ ಹಾಗೂ ಸಮರ್ಪಕವಾಗಿರುವುದಿಲ್ಲ ಎಂದು ಕಂಡುಬಂದಲ್ಲಿ. ಪ್ರಾಧಿಕಾರದ ನ್ಯಾಯಾವಾದಿ ಕರ್ತವ್ಯದಿಂದ ಅವರನ್ನು ವಜಾಗೊಳಿಸುವ ಅಧಿಕಾರ **ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಇವರಿಗೆ ಇರುತ್ತದೆ.**

| | |
|---|---|
| Sd/- | Sd/- |
| ಸದಸ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, | ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, |
| ಬೀದರ. | ಬೀದರ. |

ಇವರಿಗೆ,
ಅಧ್ಯಕ್ಷರು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಜಿಲ್ಲಾ ನ್ಯಾಯಾಲಯದ ಆವರಣ
ಬೀದರ.

ಇತ್ತೀಚಿನ ಭಾವಚಿತ್ರ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಡಿ ಪ್ಯಾನಲ್ ವಕೀಲರುಗಳ ನೇಮಕಾತಿಗಾಗಿ ಅರ್ಜಿ

| | | |
|---|---|---|
| 1 | ಅರ್ಜಿದಾರರ ಹೆಸರು | |
| 2 | ತಂದೆ /ತಾಯಿಯ ಹೆಸರು | |
| 3 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 4 | ವಿಳಾಸ<br>ಅ) ಖಾಯಂ ವಿಳಾಸ<br><br>ಆ) ಕಚೇರಿ ವಿಳಾಸ | |
| 5 | ದೂರವಾಣಿ ಸಂಖ್ಯೆ | |
| | ಮೊಬೈಲ್ ಸಂಖ್ಯೆ<br>ವಾಟ್ಸಪ್ ಸಹಿತ ಮೊಬೈಲ್ ಸಂಖ್ಯೆ | |
| 6 | ಈ ಮೇಲ್ ವಿಳಾಸ | |
| 7 | ವಿಧ್ಯಾರ್ಹತೆ | |
| 8 | ಎನ್ರೋಲಮೆಂಟ್ ನಂಬರ್ :<br>ಕರ್ನಾಟಕ ಬಾರ್ ಕೌನ್ಸಿಲನಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು | |
| 9 | ವಕೀಲ ವೃತ್ತಿಯ ಅನುಭವ :<br>ಯಾವ ವಿಭಾಗದಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿರುತ್ತಾರೆ- ಈ ಬಗ್ಗೆ ಮಾಹಿತಿ | |
| 10 | ಜಾತಿ :<br>(ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಠ ಪಂಗಡಕ್ಕೆ ಸೇರಿದಲ್ಲಿ ಜಾತಿ ಪ್ರಮಾಣ ಪತ್ರ ಲಗತ್ತಿಸಬೇಕು) | |
| 11 | ಭಾಷೆಗಳು : | ಅ) ಓದಲು / ಆ) ಬರೆಯಲು / ಇ) ಮಾತನಾಡಲು<br>1. 1. 1.<br>2. 2. 2.<br>3. 3. 3. |

ಈ ಮೇಲ್ಕಂಡ ವಿಷಯಗಳು ನಿಜ ಮತ್ತು ಸತ್ಯ ಇರುತವೇ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಕಾಯ್ದೆಯ ಉದ್ದೇಶಗಳನ್ನು ತಿಳಿದುಕೊಂಡಿರುತ್ತೇನೆಂದು ಪ್ರಮಾಣಿಕರಿಸುತ್ತೇನೆ.

ಸ್ಥಳ :

ದಿನಾಂಕ :

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು

1. SSLC Marks card
2. LLB Marks Cards
3. Enrollment Certificate
4. Bar Association Membership Certificate
5. Aadhar card